ಬೆಳಗಾವಿ ಜಿಲ್ಲೆಯ ಕಬ್ಬು ಅಭಿವೃದ್ಧಿಗೋಸ್ಕರ ವಸೂಲಿ ಮಾಡಿದ ಕರ

196 - ಶ್ರೀ ಉಮೇಶ ಕತ್ತಿ (ಹುಕ್ಕೇರಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರ ಕಬ್ಬು ಅಭಿವೃದ್ಧಿಗೋಸ್ಕರ ಕಬ್ಬು ಅಭಿವೃದ್ಧಿ ಕರವನ್ನು ರೈತರಿಂದ ವಸೂಲಿ ಮಾಡುತ್ತಿದೆಯೇ? ಹಾಗಿದ್ದಲ್ಲಿ ಯಾವ ವರ್ಷದಿಂದ ಈ ಯೋಜನೆ ತರಲಾಯಿತು?

ಆ) ಕಬ್ಬು ಅಭಿವೃದ್ಧಿಗೋಸ್ಕರ ವಸೂಲಿ ಮಾಡಿದ ಕರದ ಮೊತ್ತವೆಷ್ಟು?

ಇ) ಬೆಳಗಾವಿ ಜಿಲ್ಲೆಯಲ್ಲಿ ಕಬ್ಬು ಅಭಿವೃದ್ಧಿಗೋಸ್ಕರ ಖರ್ಚು ಮಾಡಿದ ಹಣವೆಷ್ಟು?

ಶ್ರೀ ಎಸ್.ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಕಬ್ಬು ಅಭಿವೃದ್ಧಿಗೋಸ್ಕರ ರೈತರಿಂದ ಕಬ್ಬು ಅಭಿವೃದ್ಧಿ ಕರ ಯಾವುದನ್ನೂ ರಾಜ್ಯ ಸರ್ಕಾರ ವಸೂಲು ಮಾಡುತ್ತಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಪ್ರಶ್ನೆ 'ಅ' ಗೆ ಸಂಬಂಧಿಸಿದಂತೆ ಈ ಪ್ರಶ್ನೆ ಅನ್ವಯಿಸುವುದಿಲ್ಲ.

ಚಿಕ್ಕೋಡಿ ಹತ್ತರಕಿ ರಸ್ತೆಯಲ್ಲಿ ಹಿರಣ್ಯ ಕೇಶಿ ನದಿಗೆ ಆಡ್ಡವಾಗಿರುವ ಸೇತುವೆ ಶಿಥಿಲಗೊಂಡಿರುವುದರ ಬಗ್ಗೆ

200 - ಶ್ರೀ ಉಮೇಶ ಕತ್ತಿ (ಹುಕ್ಕೇರಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕೋಡಿ - ಹತ್ತರಕಿ ರಸ್ತೆಯಲ್ಲಿ ಹಿರಣ್ಯಕೇಶಿ ನದಿಗೆ ಆಡ್ಡವಾಗಿರುವ ಸೇತುವೆ ಶಿಥಲಗೊಂಡಿರುವುದು ಮತ್ತು ಮಳೆಗಾಲದಲ್ಲಿ ಮುಚ್ಚಿಹೋಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸೇತುವೆಯ ಎತ್ತರ ಹೆಚ್ಚಿಸಿ ಜನರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಈ ಸೇತುವೆ ಶಿಥಿಲಗೊಂಡಿರುವುದಿಲ್ಲ. ಆದರೆ ಈ ಸೇತುವೆಯು ಕೆಳಮಟ್ಟದ ಸೇತುವೆ (ಕಾಸವೇ) ಆಗಿದ್ದು ಮಳೆಗಾಲದಲ್ಲಿ ಹಿರಣ್ಯ ಕೇಶಿ ನದಿಗೆ ಮಹಾಪೂರ ಬಂದಾಗ ವರ್ಷದಲ್ಲಿ 5-6 ದಿವಸಗಳವರೆಗೆ ಮುಳುಗಿ ಸಂಚಾರ ಸ್ಥಗಿತಗೊಳ್ಳುತ್ತದೆ.

ಆ) ಈಗ ಇರುವ ಕೆಳಮಟ್ಟದ ಸೇತುವೆಯ ಎತ್ತರವನ್ನು ಹೆಚ್ಚಿಸಲು ಆಗುವುದಿಲ್ಲ. ಬೇರೆ ಎತ್ತರ ಮಟ್ಟದ ಸೇತುವೆಯನ್ನು ನಿರ್ಮಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳಿಗೆ ನೀಡಿದ ಹಣದ ಬಗ್ಗೆ.

213 - ಶ್ರೀ ಉಮೇಶ ಕತ್ತಿ (ಹುಕ್ಕೇರಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲಪ್ರಬಾ ಮತ್ತು ಘಟಪ್ರಭಾ ಯೋಜನೆಗೋಸ್ಕರ 1990-91ರಲ್ಲಿ ನೀಡಿದ ಬಜೆಟ್ ಹಣವೆಷ್ಟು?

ಆ) ಈ ಬಜೆಟ್ ಹಣದಲ್ಲಿ ಎಷ್ಟು ಖರ್ಚಾಗಿರುತ್ತದೆ, ಯಾವ ಸ್ಥಳಗಳಿಗಾಗಿ ಖರ್ಚು ಮಾಡಲಾಗಿದೆ ಹಾಗೂ ಎಷ್ಟು ಹಣ ಖರ್ಚು ಮಾಡಲಾಗಿದೆ (ಪ್ರತ್ಯೇಕ ವಿವರ ನೀಡುವುದು)

ಇ) ಕಾಡಾ ಕೆಲಸ ವಿಳಂಬಿಸುವುದಕ್ಕೆ ಕಾರಣಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) 1990-91ನೇ ಸಾಲಿಗಾಗಿ ಕಾಡಾ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗೆ ರೂ.528.50 ಲಕ್ಷ ರೂ.ಗಳನ್ನು ಬಜೆಟ್‌ನಲ್ಲಿ ಒದಗಿಸಲಾಗಿದೆ.

ಆ) ಸದರಿ ಬಜೆಟ್ ಹಣದಲ್ಲಿ 1990-91ನೇ ಸಾಲಿನ ಜನವರಿ ಅಂತ್ಯದವರೆಗೆ 288-89 ಲಕ್ಷ ರೂ.ಗಳು ಖರ್ಚಾಗಿರುತ್ತದೆ. ಈ ಹಣವನ್ನು ಕೆಳಕಂಡ ಸ್ಥಳಗಳಿಗಾಗಿ ಖರ್ಚು ಮಾಡಿದೆ.

(1) **ಮಲಪ್ರಭಾ ಯೋಜನೆಯಡಿಯಲ್ಲಿ**	ಲಕ್ಷ	ರೂ.ಗಳಲ್ಲಿ
1) ನವಲಗುಂದ	-	34-06
2) ನರಗುಂದ	-	15-85
3) ರೋಣ	-	24-43
4) ಹುಬ್ಬಳ್ಳಿ	-	3-88
5) ಗದಗ	-	-
6) ರಾಮದುರ್ಗ	-	37-21
7) ಸೌಂದತ್ತಿ	-	13-13
8) ಬೈಲಹೊಂಗಲ	-	0-89
9) ಬಾದಾಮಿ	-	23-79
		153-24
2) **ಘಟಪ್ರಭಾ ಯೋಜನೆಯಡಿಯಲ್ಲಿ**		
1) ಅಥಣಿ	-	0-45
2) ಹುಕ್ಕೇರಿ	-	8-55
3) ಚಿಕ್ಕೋಡಿ	-	4-90
4) ಗೋಕಾಕ್	-	18-29
5) ರಾಯಬಾಗ್	-	15-72
6) ಬೆಳಗಾಂ	-	2-41
7) ಜಮಖಂಡಿ	-	29-62
8) ಮುಧೋಳ್	-	19-08
9) ಬಿಳಗಿ	-	8-78
10) ಬಾಗಲಕೋಟೆ	-	-
11) ಹುನಗುಂದ	-	-
		107-80
3) ಕಾಡಾ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಯ ಆಡಳಿತ ಮತ್ತು ಸಿಬ್ಬಂದಿ ವೆಚ್ಚ		27-85
ಒಟ್ಟು (1 +2 +3)		288-89

ಇ) ಈ ಕೆಳಕಂಡ ಅಂಶಗಳು ಕಾಡಾ ಕೆಲಸ ವಿಳಂಬವಾಗುವುದಕ್ಕೆ ಕಾರಣಗಳಾಗಿರುತ್ತದೆ.

1. ಬೆಳೆದು ನಿಂತ ಬೆಳೆ ಹಾಗೂ ಕಡಿಮೆ ಕೆಲಸದ ಅವಧಿ.

2. ರೈತರಿಂದ ಸಾಲದ ಪತ್ರಗಳಿಗೆ ಸಹಿ ಮಾಡುವಲ್ಲಿ ಅಸಹಕಾರ ಹಾಗೂ ಬ್ಯಾಂಕುಗಳಿಂದ ಸಾಲ ವಿತರಣೆಯಲ್ಲಿ ಆಗಿರುವ ವಿಳಂಬ.

3. ಅರಣ್ಯ ಇಲಾಖೆಯಿಂದ ಕಾಲುವೆ ನಿರ್ಮಾಣಕ್ಕೆ ಪರವಾನಿಗಿ ನೀಡದಿರುವುದು ಕೃಷ್ಣಾ ನದಿಯ ತೀರದ ರೈತರು ಬಾವಿಗಳ ಕಾಲುವೆಗಳಿಂದ ನೀರು ಒದಗಿಸುವುದು ಹಾಗೂ ರೈತರ ಒಳಜಗಳ.

4. ಬೆಳೆದು ನಿಂತ ಬೆಳೆ ಇರುವುದರಿಂದ ವಾರಾಬಂದಿ ಕೆಲಸ ಕೈಕೊಳ್ಳುವಲ್ಲಿ ಅಡಚಣೆಯಾಗಿರುವುದು. ಇವೆಲ್ಲ ಕಾರಣಗಳಿಂದ ಕಾಡಾ ಕೆಲಸವು ವಿಳಂಬವಾಗಿರುತ್ತದೆ.

ಖಾದಿ ಬೋರ್ಡಿನಲ್ಲಿ ಅಕ್ರಮ ಮತ್ತು ದುರ್ವ್ಯವಹಾರ

469 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾದಿ ಬೋರ್ಡಿನಲ್ಲಿ ಆಗಿರುವ ದುರುಪಯೋಗ ಹಾಗೂ ಭ್ರಷ್ಟಾಚಾರ/ ಅಪಾದನೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ಈ ಖಾದಿ ಬೋರ್ಡಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಕ್ರಮ ಕಾರ್ಯಗಳಲ್ಲಿ ಭಾಗವಹಿಸಿ ಖಾದಿ ಮಂಡಳಿಗೆ ನಷ್ಟ ಮಾಡಿರುವುದರ ಬಗ್ಗೆ ಸರ್ಕಾರದವರಿಗೆ ದೂರುಗಳೇನಾದರೂ ಬಂದಿದೆಯೇನು, ಹಾಗಿದ್ದರೆ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು):

ಅ) ಹೌದು. ಆದರೆ ಅನಾಮಧೇಯ ಹಾಗೂ ಹುಸಿ ಅರ್ಜಿಗಳು.

ಆ) ಪರಿಶೀಲಿಸಲಾಗುತ್ತಿದೆ.

ಇ) ಹೌದು. ಅನಾಮಧೇಯ ಹಾಗೂ ಹುಸಿ ಅರ್ಜಿಗಳು. ಪರಿಶೀಲಿಸಲಾಗುತ್ತಿದೆ.

ದಕ್ಷಿಣ ಕನ್ನಡದಲ್ಲಿ ಸಣ್ಣ ಕೈಗಾರಿಕೆಗಳು

1052 - ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಈವರೆಗೆ ಎಷ್ಟು ಶೆಡ್ಡುಗಲನ್ನು ನಿರ್ಮಿಸಲಾಗಿದೆ?

ಆ) ಇದಕ್ಕಾಗಿ ಎಷ್ಟು ಎಕರೆ ಜಮೀನು ನೀಡಲಾಗಿದೆ? 1990ನೇ ಡಿಸೆಂಬರ್ ಅಖೈರ್‌ವರೆಗೆ ಎಷ್ಟು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ ಹಾಗೂ ಎಷ್ಟು ಬಂಡವಾಳ ಒದಗಿಸಿಕೊಡಲಾಗಿದೆ?

ಇ) ಇದರಿಂದ ಎಷ್ಟು ಜನರಿಗೆ ಉದ್ಯೋಗಾವಕಾಶ ದೊರಕಿರುತ್ತದೆ?

ಶ್ರೀ ನಸೀರ್ ಅಹಮದ್(ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು) :

ಅ) 259.

ಆ) 101.17 ಎಕರೆ.

1990ನೇ ಡಿಸೆಂಬರ್ ಅಂತ್ಯದವರೆಗೆ 230 ಘಟಕಗಳು ಸ್ಥಾಪಿಸಲ್ಪಟ್ಟಿವೆ. ಸುಮಾರು ರೂ. 256 ಲಕ್ಷಗಳು.

ಇ) ಸುಮಾರು 1,500.